

ಕೂರ್ಮಗಡ ನಡುಗಡ್ಡೆ ಬ್ರಿಟಿಷರ ಕಾಲಕ್ಕೆ ಸುಮಾರು 300 ವರ್ಷಗಳ ಹಿಂದೆ, ಅಂದರೆ ಮೂರು ತಲೆಮಾರುಗಳ ಹಿಂದೆ ಮಥಾಯಿಸ್ ಕುಟುಂಬದ ಆಸ್ತಿಯಾಗಿ ಮಾರ್ಪಟ್ಟಿದೆ. ಮಥಾಯಿಸ್ ಎಂಬವರ ಮುತ್ತಜ್ಜ ಈ ದ್ವೀಪವನ್ನು ಖರೀದಿಸಿದ್ದರಂತೆ.

ಇಡೀ ನಡುಗಡ್ಡೆ 33 ಎಕರೆ 10 ಗುಂಟೆ ವಿಸ್ತೀರ್ಣ ಹೊಂದಿದ್ದು, ಒಂದು ಎಕರೆ ಪ್ರದೇಶ ಬಂದರು ಇಲಾಖೆಯ ಕಬ್ಜಾದಲ್ಲಿದೆ. 32 ಎಕರೆ 10 ಗುಂಟೆ ಭೂಮಿ ಮುಲ್ಕಿ ಜಮೀನು ಎಂದು ದಾಖಲೆಗಳು ಹೇಳುತ್ತಿವೆ. ಸರ್ವೆ ನಂಬರ್ 1158 ಅ ಕ್ಷೇತ್ರದಲ್ಲಿ ಐಲ್ಯಾಂಡ್ ರೆಸಾರ್ಟ್ ನಡೆಸಲು ಪೋರೆನ್ಸಾ ಡಿ.ಮಥಾಯಿಸ್ 12-10-1989ರಲ್ಲಿ ಅಧಿಕೃತ ಪರವಾನಿಗೆ ಪಡೆದಿದ್ದಾರೆ. ಇಲ್ಲಿ ಪರಿಸರಸ್ನೇಹಿ ಗುಡಿಸಲುಗಳಿದ್ದು ಪ್ರವಾಸಿಗರು ತಂಗಿ ಹೋಗುತ್ತಿದ್ದಾರೆ. ಪ್ರವಾಸೋದ್ಯಮ ಅಭಿವೃದ್ಧಿ ದೃಷ್ಟಿಯಿಂದ ಇಲ್ಲಿ ಅನೇಕ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ವಾಟರ್ ಸ್ಪೋರ್ಟ್ಸ್ ಅವಕಾಶಗಳೂ ಸಹ ಪ್ರವಾಸಿಗರಿಗೆ ಲಭ್ಯ ಇವೆ.

**ಹೆಲಿ ಟೂರಿಸಂ ಶುರು**

ಹೆಲಿಕಾಪ್ಟರ್ ಬಳಸಿ ಪ್ರವಾಸಿ ತಾಣ ತಲುಪುವ ಶ್ರೀಮಂತ ಪ್ರವಾಸೋದ್ಯಮಕ್ಕೆ ಕೇಂದ್ರ ಸರ್ಕಾರ ಹಸಿರು ನಿಶಾನೆಯನ್ನು ತಿಂಗಳ ಹಿಂದಷ್ಟೇ ತೋರಿದೆ. ಕಾರವಾರ ಸಹ ಹೆಲಿ ಟೂರಿಸಂನಲ್ಲಿ ಸೇರ್ಪಡೆಯಾಗಿದೆ. ಪ್ರವಾಸಿಗರು ಇನ್ನು ಮುಂದೆ ಕಾರವಾರಕ್ಕೆ ಹೆಲಿಕಾಪ್ಟರ್‌ನಲ್ಲಿ ಹಾರಿ ಬರಬಹುದು. ಹಾಗೆ ಬಂದವರು ದ್ವೀಪ ರೆಸಾರ್ಟ್ ಕೂರ್ಮಗಡ ಅಪ್ಸರೆಯನ್ನೋ ಅಥವಾ ಬೀಚ್ ರೆಸಾರ್ಟ್ ದೇವಭಾಗ ರಾಣಿಯನ್ನೋ ಕೂಡಿಕೊಳ್ಳಬಹುದು.

